# ‘ಪೋರ್ಕಿ’ಯ ಸರದಿ!

ಹುಚ್ಚ ವೆಂಕಟ್ ನಟನೆಯ ‘ಪೋರ್ಕಿ ಹುಚ್ಚ ವೆಂಕಟ್’ ಸಿನಿಮಾ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ (ಏ. 28ರಂದು ತೆರೆಗೆ). ಹಸಿವು, ತಾಯಿ ಸೆಂಟಿಮೆಂಟು, ರಾಜಕಾರಣ ಹಾಗೂ ರೌಡಿಸಂ ಚಿತ್ರಕಥೆಯ ಹೂರಣ. ‘ಯಾರೂ ಕಾನೂನನ್ನು ಕೈಗೆ ತೆಗೆದುಕೊಳ್ಳಬಾರದು’ ಎಂಬ ಸಂದೇಶ ಸಿನಿಮಾದಲ್ಲಿ ಇದೆಯಂತೆ.

ಹುಚ್ಚ ವೆಂಕಟ್ ಜೊತೆಗೆ ಪೋರ್ಕಿ ಎನ್ನುವ ವಿಶೇಷಣ ಸೇರಿಕೊಂಡ ಬಗ್ಗೆ ಒಂದು ಕಥೆಯಿದೆ. ವೆಂಕಟ್ ಅವರಿಗೆ ತಮ್ಮ ತಾಯಿಯ ಬಗ್ಗೆ ವಿಶೇಷ ಅಭಿಮಾನ. ಈ ಅಮ್ಮ ತನ್ನ ಮಗನನ್ನು ಪ್ರೀತಿಯಿಂದ ‘ಪೋರ್ಕಿ’ ಎಂದು ಕರೆಯುತ್ತಿದ್ದಾರೆ. ಅಮ್ಮನ ಪ್ರೀತಿಯ ಬೈಗುಳವನ್ನು ಆಶೀರ್ವಾದವೆಂದು ಬಗೆದಿರುವ ಅವರು, ತಮ್ಮ ಚಿತ್ರದ ಶೀರ್ಷಿಕೆಯನ್ನು ‘ಪೋರ್ಕಿ ಹುಚ್ಚ ವೆಂಕಟ್’ ಎಂದು ಹೆಸರಿಸಿದ್ದಾರೆ.

‘ಪೋರ್ಕಿ...’ ಕೂಡ ವೆಂಕಟ್‌ರ ಬಹುಮುಖ ಪ್ರತಿಭೆ ಅನಾವರಣಗೊಂಡಿರುವ ಸಿನಿಮಾ. ನಿರ್ದೇಶನ–ನಿರ್ಮಾಣ–ನಟನೆಯ ಜವಾಬ್ದಾರಿಯೊಂದಿಗೆ ಕಥೆ, ಚಿತ್ರಕಥೆ, ಸಂಭಾಷಣೆಯ ಹೊಣೆಯನ್ನೂ ಅವರು ನಿರ್ವಹಿಸಿದ್ದಾರೆ. ಚಿತ್ರಗೀತೆಗಳ ಸಾಹಿತ್ಯವೂ ಅವರದೇ. ಹಿನ್ನೆಲೆ ಗಾಯಕರ ಪಟ್ಟಿಯಲ್ಲಿ ಕೂಡ ಅವರ ಹೆಸರಿದೆ. ಹಾಗಾಗಿ, ಚಿತ್ರದ ಕ್ಷಣಕ್ಷಣವೂ ಪ್ರೇಕ್ಷಕರು ‘ವೆಂಕಟ್‌ತನ’ವನ್ನು ಕಾಣಬಹುದಾಗಿದೆ.

ಪೋರ್ಕಿಗೆ ನಾಯಕಿಯಾಗಿ ರಚನಾ ನಟಿಸಿದ್ದಾರೆ. ಚಿತ್ರದಲ್ಲೊಂದು ಡುಯೆಟ್ ಕೂಡ ಇದೆ. ಆದರೆ, ಇಡೀ ಹಾಡಿನಲ್ಲಿ ನಾಯಕ ಮತ್ತು ನಾಯಕಿ – ರೈಲಿನ ಹಳಿಗಳಂತೆ ಪ್ರತ್ಯೇಕವಾಗಿ ಇರುತ್ತಾರಂತೆ.





## ತಾರಾ ಸಂಭ್ರಮದ ‘ನ್ಯೂ ಇಯರ್’

ಹೊಸ ವರ್ಷದ ಸಂಭ್ರಮಾಚರಣೆಗೆ ಒದಗಿಬರುವ ವಿಶೇಷಣ – ‘ಹ್ಯಾಪಿ ನ್ಯೂ ಇಯರ್’. ಈ ಸಂಭ್ರಮದ ಉದ್ಗಾರವನ್ನೇ ಶೀರ್ಷಿಕೆ ಆಗಿಸಿಕೊಂಡಿರುವ ಸಿನಿಮಾ ಇದೀಗ ತೆರೆ ಕಾಣಲು ಸಜ್ಜಾಗಿದೆ.

‘ಹ್ಯಾಪಿ ನ್ಯೂ ಇಯರ್’ ತಾರಾಗಣದಿಂದ ಗಮನಸೆಳೆದಿರುವ ಸಿನಿಮಾ. ಕನ್ನಡ ಚಿತ್ರರಂಗದ ತಾರಾನಟರ ಒಂದು ಗುಂಪೇ ಈ ಚಿತ್ರದಲ್ಲಿ ಕಾಣಿಸಿಕೊಂಡಿದೆ. ಮುಖ್ಯವಾಗಿ, ಹಲವು ವರ್ಷಗಳ ಬಿಡುವಿನ ನಂತರ ಬಿ.ಸಿ. ಪಾಟೀಲ್ ಮತ್ತೆ ನಟಿಸಿರುವ ಚಿತ್ರವಿದು. ಅವರ ಮಗಳು ಸೃಷ್ಟಿ ಪಾಟೀಲ್ ಕೂಡ ಚಿತ್ರದ ಮುಖ್ಯ ಪಾತ್ರವೊಂದರಲ್ಲಿ ನಟಿಸಿದ್ದಾರೆ. ವಿಜಯ್ ರಾಘವೇಂದ್ರ, ದಿಗಂತ್, ಧನಂಜಯ್, ಸಾಯಿಕುಮಾರ್, ಶ್ರುತಿ ಹರಿಹರನ್, ಸುಧಾರಾಣಿ, ಸೋನುಗೌಡ, ಮಾಳವಿಕಾ ಅವಿನಾಶ್, ತಬಲಾ ನಾಣಿ, ರಾಜು ತಾಳಿಕೋಟೆ – ಹೀಗೆ ಪ್ರತಿಭಾವಂತ ಕಲಾವಿದರ ತಂಡ ಚಿತ್ರದಲ್ಲಿದೆ.

ಪನ್ನಗಾಭರಣ ಚಿತ್ರದ ನಿರ್ದೇಶಕರು. ಸ್ವತಂತ್ರ ನಿರ್ದೇಶಕರಾಗಿ ಅವರಿಗಿದು ಮೊದಲ ಸಿನಿಮಾ. ಬದುಕಿನಲ್ಲಿನ ಸಂಚಾರಿ ಭಾವಗಳನ್ನು ಸಿನಿಮಾದಲ್ಲಿ ಅವರು ತೋರಿಸಿದ್ದಾರಂತೆ. ‘ಜೀವನ ಎನ್ನುವುದು ಒಂದು ಪಯಣ’ ಎನ್ನುವ ನಂಬಿಕೆಯನ್ನು ಅವರು – ವಿಭಿನ್ನ ವ್ಯಕ್ತಿತ್ವಗಳ ಐವರ ಬದುಕಿನ ಮೂಲಕ ಚಿತ್ರದಲ್ಲಿ ವಿಶ್ಲೇಷಿಸಿದ್ದಾರಂತೆ. ಮುಖಗಳು ಹಾಗೂ ಮುಖವಾಡಗಳನ್ನು ಅನಾವರಣಗೊಳಿಸುತ್ತಾ ಸಾಗುವ ಈ ಸಿನಿಮಾ ಚಿತ್ರರಸಿಕರಿಗೆ ಇಷ್ಟವಾಗುವ ವಿಶ್ವಾಸ ಅವರದು.

ರಘು ದೀಕ್ಷಿತ್ ಸಂಗೀತ ಸಂಯೋಜನೆ ಚಿತ್ರದ ಮತ್ತೊಂದು ವಿಶೇಷ. ಶ್ರೀಶ ಕೂದುವಳ್ಳಿ ಛಾಯಾಗ್ರಹಣ ಚಿತ್ರಕ್ಕಿದೆ. ಸಿನಿಮಾದ ಬಹುತೇಕ ಶೂಟಿಂಗ್ ಹಿರೇಕೆರೂರಿನ ಪರಿಸರದಲ್ಲಿ ನಡೆದಿದೆ. ಮೇ 5ರಂದು ಚಿತ್ರ ತೆರೆ ಕಾಣುತ್ತಿದೆ.